

**ಹಳೆಯ ಫ್ಯಾಷನ್ ಮತ್ತೆ ಮರುಕಳಿಸಿದೆ. ಆ್ಯಂಟಿಕ್ ಒಡವೆಗಳು ಅಜ್ಜಿಕಾಲದ್ದು ಎಂದೇ ಹೆಸರಾಗಿತ್ತು. ಆದರೆ ಈಗ ಆ್ಯಂಟಿಕ್ ಒಡವೆ ಫ್ಯಾಷನ್ ಟ್ರೆಂಡ್ ಆಗಿದೆ.**

# ಆಹಾ ಆ್ಯಂಟಿಕ್!

ಆಭರಣ ಫ್ಯಾಷನ್ ಎಂದರೆ ಅದು ಎಂದಿಗೂ ಮಹಿಳೆಯರ ಮೆಚ್ಚು. ಚಿನ್ನದ ಒಡವೆ ಎಂದರೆ ಅದೇನೊ ಆಕರ್ಷಣೆ. ಇದರಲ್ಲೂ ತರಾವರಿ ವಿನ್ಯಾಸದವು ಇದ್ದರೂ ಆ್ಯಂಟಿಕ್ ಒಡವೆಗಳು ಸೆಳೆಯುವ ವಿಧಾನವೇ ಬೇರೆ.

ಸಾಮಾನ್ಯವಾಗಿ ಆ್ಯಂಟಿಕ್ ಒಡವೆ ಎಂದರೆ ಅದು ಹಳೆಕಾಲದ್ದು, ವಯಸ್ಸಾದವರಿಗೇ ಸೀಮಿತ ಎಂಬ ಭಾವನೆ ಹಿಂದೆ ಹಲವರಲ್ಲಿತ್ತು. ಆದರೆ ಫ್ಯಾಷನ್ ಪ್ರಪಂಚದಲ್ಲಿ ಇದೀಗ ಆ್ಯಂಟಿಕ್ ಆಭರಣ ಟ್ರೆಂಡ್ ಆಗಿದೆ.

ಆ್ಯಂಟಿಕ್ ಹಾರ, ಕಿವಿಯೋಲೆ, ಬ್ರೇಸ್ಲೆಟ್, ಉಂಗುರ, ಒಡ್ಯಾಣ ಎಲ್ಲವೂ ಆ್ಯಂಟಿಕ್‌ನದ್ದೇ ಸದ್ದು ಮಾಡುತ್ತಿರುವುದು. ಕತ್ತಿನ ಹಾರವಂತೂ ಮದುವೆ ಮುಂಜಿಗಳಂತಹ ಶುಭ ಸಮಾರಂಭಕ್ಕೆ ಹೇಳಿ ಮಾಡಿಸಿದಂತಿವೆ. ಭರ್ಜರಿ ರೇಷ್ಮೆ ಸೀರೆ ಉಟ್ಟಾಗ ಒಂದೇ ಒಂದು ಆ್ಯಂಟಿಕ್ ಹಾರ ಧರಿಸುವುದು ಒಳಿತು. ಕಾಂಜೀವರಂ, ಧರ್ಮಾವರಂ. ಬನಾರಸ್ ಸೀರೆಗಳಂತಹ ಭರ್ಜರಿ ಪಲ್ಲು, ಸೆರಗು ಇರುವ ಸೀರೆ ಉಟ್ಟಾಗ ಆ್ಯಂಟಿಕ್ ಒಡವೆ ಎದ್ದುಕಾಣುತ್ತದೆ. ಉದ್ದನೆಯ ಹಾರ ಮಾತ್ರವಲ್ಲದೆ ಎರಡು ಅಥವಾ ನಾಲ್ಕೆಳೆ ಸರಗಳೂ ಇಂತಹ ಸೀರೆಗಳಿಗೆ ಸೂಕ್ತವೆನಿಸಿವೆ.

ಆ್ಯಂಟಿಕ್ ಜುಮುಕಿಗಳು ಮಹಿಳೆಯರಿಗೆ ಇಷ್ಟ. ದೇವಾನುದೇವತೆಗಳ ಪರಿಕಲ್ಪನೆಯ ಚಿತ್ರಗಳು ಆ್ಯಂಟಿಕ್ ಒಡವೆಗಳಲ್ಲಿ ಒಡಮೂಡಿದಾಗ ಅಲ್ಲಿ ಭಾವನಾತ್ಮಕ ಸಂವೇದನೆಗಳು ಸೃಷ್ಟಿಯಾಗುತ್ತವೆ. ಆ್ಯಂಟಿಕ್ ಜುಮುಕಿ ಜೊತೆಗೆ ಚಾಂದ್‌ಬಾಲಿಯಂತಹ ಅಗಲವಾದ ಕಿವಿಯೋಲೆ ರೇಷ್ಮೆ ಸೀರೆಗೆ ಸಖತ್ ಹೊಂದುತ್ತದೆ. ಆ್ಯಂಟಿಕ್ ಒಡವೆಗಳು ಉಡುಪಿನ ಅಂದ, ಹೆಣ್ಣಿನ ಒಟ್ಟಂದ ಹೆಚ್ಚಿಸುವಲ್ಲಿ ಸಹಕಾರಿ.

## ಮದುಮಗಳಿಗಾಗಿಯೇ ಆ್ಯಂಟಿಕ್

ಮದುವೆಯ ಸೀಸನ್‌ನಲ್ಲಿ ಆಭರಣಗಳ ಖರೀದಿ ಜೋರು. ನೆಕ್ಲೇಸ್, ಕಿವಿಯೋಲೆ, ಬಳೆಗಳು, ಉಂಗುರಗಳನ್ನು ಇಂದಿನ ಟ್ರೆಂಡ್‌ಗೆ ತಕ್ಕಂತೆ ಧರಿಸಿದರೆ ಮದುಮಗಳು ಇನ್ನಷ್ಟು ಮಿಂಚುತ್ತಾಳೆ. ಚಿನ್ನ, ವಜ್ರದಲ್ಲಿ ಮಾಡಿದ ತರಾವರಿ ಆಭರಣಗಳ ಜತೆಗೆ ಮದುವೆಗೆ, ಪಾರ್ಟಿಗೆ, ಶುಭ ಕಾರ್ಯಕ್ರಮಕ್ಕೆ ಹೋಗುವ ಮಹಿಳೆಯರು ಹೊಸ ಹೊಸ ವಿನ್ಯಾಸಗಳ ಒಡವೆಗಳತ್ತ ಮುಖ ಮಾಡಿದ್ದಾರೆ.

ಇದೇ ಸಾಲಿಗೆ ಸೇರುವ ಆಭರಣಗಳಲ್ಲಿ ಆ್ಯಂಟಿಕ್ ಸಂಗ್ರಹವೂ ಒಂದು. ಈ ಸಂಗ್ರಹದಲ್ಲಿ ಮುಖ್ಯವಾಗಿ ದಕ್ಷಿಣ ಭಾರತದ ವಿವಿಧ ದೇವಾಲಯಗಳಲ್ಲಿರುವ ದೇವತೆಗಳ ವಿಗ್ರಹಗಳಿಂದ ಪ್ರೇರಿತವಾಗಿ ತಯಾರಿಸಿದ ಆಭರಣಗಳಿವೆ. ವಧು ಧರಿಸುವ ಸಾಂಪ್ರದಾಯಿಕ ಮತ್ತು ಸಮಕಾಲೀನ ಆಭರಣಗಳಿಗೆ ಆ್ಯಂಟಿಕ್‌ನಲ್ಲೇ ಹೊಸ ಟಚ್ ನೀಡಿದ್ದು ಮದುಮಗಳು ಹೆಚ್ಚು ಆಕರ್ಷಕವಾಗಿ ಕಾಣಲು ಕಾರಣವಾಗಿದೆ.

‘ಆ್ಯಂಟಿಕ್ ಆಭರಣಗಳು ಎಲ್ಲ ವಯೋಮಾನದವರನ್ನು ಸೆಳೆಯುತ್ತದೆ. ಅಲ್ಲದೆ ಎಲ್ಲ ರೀತಿಯ ಉಡುಗೆಗಳಿಗೆ ಸರಿ ಹೊಂದುತ್ತವೆ. ಹೀಗಾಗಿ ಗ್ರಾಹಕರು ಇಂತಹ ಆಭರಣಗಳನ್ನೇ ಇದೀಗ ಹೆಚ್ಚು ಹೆಚ್ಚು ಖರೀದಿಸುತ್ತಿದ್ದಾರೆ. ಸಾಂಪ್ರದಾಯಿಕ ಆಭರಣ ಶ್ರೇಣಿಯಡಿ ಗೆಜ್ಜೆ ಮಾಲಾಕ್, ಕೆಂಪು ಹರಳಿನ ನೆಕ್ಲೇಸ್, ಜುಮುಕಿ, ಕಿವಿಯೋಲೆ, ಬಳೆಗಳು, ಪಚ್ಚೆ, ವಜ್ರ, ಮಾಣಿಕ್ಯ ಹಾಗೂ ಚಿನ್ನದಿಂದ ತಯಾರಿಸಿದ ಆಕರ್ಷಕ ಮಾಂಗ್ಟೀಕಾಗಳು (ಹಣೆಯ ಮೇಲೆ ಧರಿಸುವಂತಹ ಆಭರಣ) ಲಭ್ಯ. ಈ ಸಂಗ್ರಹವು ವಧುವಿನ ವೈಭವಕ್ಕೆ ಸರಿ ಹೊಂದುವಂತಿದೆ, ಮದುವೆ, ಮುಂಜಿಗಳಂತಹ ಅದ್ದೂರಿಯ ಸಂದರ್ಭಗಳಲ್ಲಿ ಧರಿಸಲು ಸೂಕ್ತವಾಗಿವೆ’ ಎನ್ನುತ್ತಾರೆ ಬೆಂಗಳೂರಿನ ಫ್ಯಾಷನ್ ತಜ್ಞೆ ಸೌಂದರ್ಯ.

ಒಡವೆಗಳಲ್ಲಿ ಹಳೆ ಫ್ಯಾಷನ್ ಮತ್ತೆ ಮರುಕಳಿಸಿದ್ದು, ತಿಜೋರಿಯಲ್ಲಿ ಜತನವಾಗಿ ಕಾಪಾಡಿಕೊಂಡು ಬಂದಿದ್ದ ಅಜ್ಜಿಕಾಲದ ಒಡವೆಗಳಿಗೆ ಈಗ ಆಧುನಿಕ ಸ್ಪರ್ಶ ಸಿಕ್ಕಿದಂತಾಗಿದೆ.

■ ಯು.ಎ.